# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | **ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ)** |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **90** |
| ಉತ್ತರಿಸಬೇಕಾದ ದಿನಾಂಕ | : | **04-03-2025** |
| ಉತ್ತರಿಸಬೇಕಾದ ಸಚಿವರು | : | **ಸಹಕಾರ ಸಚಿವರು** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಗಳ ದರ ಪರಿಷ್ಕರಣೆ ಸಂಬಂಧ ಯಾರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸಲ್ಪಟ್ಟಿದೆ; ಸಮಿತಿಯಲ್ಲಿ ಯಾರು ಯಾರು ಇದ್ದಾರೆ ವಿವರ (ಆದೇಶದ ಪ್ರತಿ) ನೀಡುವುದು; ಹಾಗೂ ಸದರಿ ವಿಷಯ ಕುರಿತು ಈ ತಜ್ಞರ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ; | ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಗಳ ದರ ಪರಿಷ್ಕರಿಸಲು ಸರ್ಕಾರವು ಡಾ॥ ಶ್ರೀನಿವಾಸ ಎನ್.ಟಿ. ಮಾನ್ಯ ಶಾಸಕರು, ಕೂಡ್ಲಗಿ ವಿಧಾನಸಭಾ ಕ್ಷೇತ್ರ ಇವರ ಅಧ್ಯಕ್ಷತೆಯಲ್ಲಿ ನುರಿತ ವೈದ್ಯರು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳನ್ನೊಳಗೊಂಡ ತಜ್ಞರ ಸಮತಿಯನ್ನು ರಚಿಸಿದೆ.<br><br>ಆದೇಶದ ಪ್ರತಿಯನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ.<br><br>ಸದರಿ ಸಮಿತಿಯು ಇದುವರೆವಿಗೆ 11 ಸಭೆಗಳನ್ನು ಜರುಗಿಸಿದ್ದು, ದರ ಪರಿಷ್ಕರಣೆ ಬಗ್ಗೆ ಚರ್ಚಿಸಿ ಪರಿಶೀಲಿಸಲಾಗಿದ್ದು, ದಿನಾಂಕ: 31-03-2025 ರೊಳಗೆ ವರದಿ ಸಲ್ಲಿಕೆಯಾಗುವ ಸಾಧ್ಯತೆ ಇದೆ. |
| ಆ) | ಇದ್ದಲ್ಲಿ, ಯಾವ ಯಾವ ಚಿಕಿತ್ಸೆಗಳಿಗೆ ಎಷ್ಟು ದರ ಪರಿಷ್ಕರಿಸಲು ಶಿಫಾರಸ್ಸು ಮಾಡಲಾಗಿದೆ; ಚಿಕಿತ್ಸೆವಾರು ಹಿಂದಿನ ಮತ್ತು ಪರಿಷ್ಕೃತ ದರದ ಸಂಪೂರ್ಣ ವಿವರ ನೀಡುವುದು; | ದರ ಪರಿಷ್ಕರಣೆ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ. |

| | | |
|---|---|---|
| ಇ) | ಯಶಸ್ವಿನಿ ಯೋಜನೆ ಜಾರಿ ಬಳಿಕ ಎಷ್ಟು ಚಿಕಿತ್ಸೆಗಳನ್ನು ಹೆಚ್ಚುವರಿಯಾಗಿ ಸೇರ್ಪಡೆ ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು) | 1. ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ ದಿನಾಂಕ: 01-11-2022 ರಿಂದ ಮರುಜಾರಿಗೊಳಿಸಿದ್ದು, ಫಲಾನುಭವಿಗಳಿಗೆ ಚಿಕಿತ್ಸೆಯನ್ನು ದಿನಾಂಕ: 01-01-2023 ರಿಂದ ಒದಗಿಸಲಾಗಿದೆ.<br><br>2. ಯಶಸ್ವಿನಿ ಯೋಜನೆಯಡಿ ಪ್ರಾರಂಭಿಕ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಚಿಕಿತ್ಸೆಗಳ ಪೈಕಿ 1650 ಮೂಲ ಚಿಕಿತ್ಸೆ (Basic Procedure) ಗಳನ್ನು ಯಶಸ್ವಿನಿ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಚಿಕಿತ್ಸೆಗಳಲ್ಲಿ ಗ್ರಾಮೀಣ ಭಾಗದವರಿಗೆ ಹೆಚ್ಚು ಅಗತ್ಯವಿದ್ದ ಹಾಗೂ ಈ ಹಿಂದಿನ ಹಳೆಯ ಯಶಸ್ವಿನಿ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದ ಕಣ್ಣಿನ ರೋಗಗಳ ವಿಭಾಗಕ್ಕೆ ಸಂಬಂಧಿಸಿದಂತೆ Avastin Injection ಹಾಗೂ Silcon oil removal, ಹೃದಯ ರೋಗಕ್ಕೆ ಸಂಬಂಧಿಸಿದಂತೆ ಕರೋನರಿ ಅಂಜಿಯೋಗ್ರಾಮ್ (CAG) ಮತ್ತು Normal Delivery ಈ ಚಿಕಿತ್ಸೆಗಳನ್ನು ಅಳವಡಿಸಿಕೊಳ್ಳಲಾಗಿದೆ.<br><br>3. ಇದಾದ ನಂತರ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದ ಪೂರಕ ಚಿಕಿತ್ಸೆ (Ancillary Procedure) ಗಳಾದ ICU (Without ventilator), ICU (With ventilator) and HDU ಈ ವಿಭಾಗಗಳ ಒಟ್ಟು 478 ಚಿಕಿತ್ಸೆಗಳನ್ನು ಫಲಾನುಭವಿಗಳ ಮತ್ತು ಆಸ್ಪತ್ರೆಗಳ ಬೇಡಿಕೆಯಂತೆ ಅಳವಡಿಸಿಕೊಳ್ಳಲಾಗಿದೆ. ಅಂದರೆ ಯಶಸ್ವಿನಿ ಯೋಜನೆಯಲ್ಲಿ ಒಟ್ಟು 2128 ಚಿಕಿತ್ಸೆ (ಮೂಲ 1650 ಚಿಕಿತ್ಸೆಗಳನ್ನು ಮತ್ತು 478 ICU, HDU ಚಿಕಿತ್ಸೆಗಳನ್ನು) ಗಳನ್ನು ದಿನಾಂಕ:25-01-2023 ರಿಂದ ಅನ್ವಯವಾಗುವಂತೆ ಯಶಸ್ವಿನಿ ಯೋಜನೆಯಲ್ಲಿ ಅಳವಡಿಸಿಕೊಂಡು ಜಾರಿಗೊಳಿಸಲಾಗಿದೆ. ಇದು ಜಾರಿಯಾದ ನಂತರ ಯಾವುದೇ ಹೆಚ್ಚುವರಿ ಚಿಕಿತ್ಸೆಗಳನ್ನು ಸೇರ್ಪಡೆ ಮಾಡಿಕೊಂಡಿರುವುದಿಲ್ಲ. |

| | | |
|---|---|---|
| ಈ) | ಯಶಸ್ವಿನಿ ಚಿಕಿತ್ಸಾ ದರಗಳು ಕಡಿಮೆ ಇರುವುದೆಂದು ಭಾವಿಸಿ ರಾಜ್ಯದ ಪ್ರಮುಖ ಆಸ್ಪತ್ರೆಗಳು ಯೋಜನೆಯಡಿ ನೋಂದಾಯಿಸಿಕೊಳ್ಳದೇ ಇರುವುದು ನಿಜವೇ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಯಶಸ್ವಿನಿ ಯೋಜನೆಯಲ್ಲಿ ಅಳವಡಿಸಿ ಕೊಂಡಿರುವ ದರಗಳು ಕಡಿಮೆ ಇದೆ ಎಂಬ ಕಾರಣ ನೀಡಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಪ್ರಮುಖ/ಪ್ರತಿಷ್ಠಿತ ಆಸ್ಪತ್ರೆಗಳು ಯಶಸ್ವಿನಿ ನೆಟ್ ವರ್ಕ್ ಆಸ್ಪತ್ರೆಗಳಾಗಿ ನೋಂದಣಿ ಮಾಡಿಕೊಳ್ಳಲು ಮುಂದೆ ಬಾರದಿರುವುದು ನಿಜವಿರುತ್ತದೆ. ಈ ವಿಷಯವು ಸರ್ಕಾರದ ಗಮನಕ್ಕೆ ಬಂದ ನಂತರ ಸರ್ಕಾರವು ಈ ಆಸ್ಪತ್ರೆಗಳ ಬೇಡಿಕೆಯನ್ನು ಪರಿಗಣಿಸಿ ಯಶಸ್ವಿನಿ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಚಿಕಿತ್ಸೆಗಳ ಪೈಕಿ 206 ಚಿಕಿತ್ಸೆಗಳ ದರಗಳನ್ನು ಪರಿಷ್ಕರಿಸಿದೆ. ಸರ್ಕಾರವು ದಿನಾಂಕ: 24-01-2023 ರಂದು ಆದೇಶ ಹೊರಡಿಸಿದ್ದು, ಈ ಪರಿಷ್ಕೃತ ದರಗಳನ್ನು ದಿನಾಂಕ:25-01-2023 ರಿಂದ ಜಾರಿಗೊಳಿಸಿದೆ. ಇದಾದ ನಂತರ ಅನೇಕ ಆಸ್ಪತ್ರೆಗಳು ನೆಟ್‌ವರ್ಕ್ ಆಸ್ಪತ್ರೆಗಳಾಗಿ ನೋಂದಣಿ ಮಾಡಿಕೊಂಡಿರುತ್ತವೆ.<br><br>ಚಿಕಿತ್ಸೆ ದರ ಹೆಚ್ಚಳದ ಕುರಿತು ಸರ್ಕಾರವು ಹೊರಡಿಸಿರುವ ಆದೇಶದ ಪ್ರತಿಯನ್ನು **ಅನುಬಂಧ – 2** ರಲ್ಲಿ ನೀಡಲಾಗಿದೆ.<br><br>ಪ್ರಸ್ತುತ ಸರ್ಕಾರವು ದರ ಪರಿಷ್ಕರಣೆಗೆ ಸಮಿತಿ ರಚಿಸಿರುವುದರಿಂದ ಸಮಿತಿ ವರದಿ ಬಂದು ಸಮಿತಿಯ ಶಿಫಾರಸ್ಸುಗಳು ಅನುಷ್ಠಾನ ಆದ ನಂತರ ಇನ್ನು ಹೆಚ್ಚಿನ ಆಸ್ಪತ್ರೆಗಳು ಯೋಜನೆಯಲ್ಲಿ ತೊಡಗಿಸಿಕೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. |

**ಸಂಖ್ಯೆ: ಸಿಒ 44 ಸಿಎಲ್‌ಎಸ್ 2025**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ಅನುಬಂಧ - 1

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಗಳ ದರ ಪರಿಷ್ಕರಣೆಗೆ ತಜ್ಞರ ಸಮಿತಿ ರಚಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಸಿಒ 154 ಸಿಎಲ್‌ಎಸ್ 2022, ದಿ:12-10-2022.
2. ಸಹಕಾರ ಸಂಘಗಳ ನಿಬಂಧಕರ ಕಛೇರಿ ಪತ್ರ ಸಂಖ್ಯೆ: RCS/INDL/IND1(MISC)/45/2024-INDUSTRIES, ದಿನಾಂಕ: 05-07-2024.

****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1) ರ ಸರ್ಕಾರದ ಆದೇಶದಲ್ಲಿ , 2018 ರಲ್ಲಿ ಸ್ಥಗಿತಗೊಳಿಸಿದ್ದ ಯಶಸ್ವಿನಿ ಯೋಜನೆಯನ್ನು 2022-23ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಒ 154 ಸಿಎಲ್‌ಎಸ್ 2022, ದಿ:12-10-2022 ರ ಆದೇಶದ ಮೂಲಕ ಸಹಕಾರ ಇಲಾಖೆಯಲ್ಲಿ ಮರುಜಾರಿಗೊಳಿಸಲಾಗಿರುತ್ತದೆ. ಸದರಿ ಯೋಜನೆಯನ್ನು 2023-24ನೇ ಸಾಲಿಗೆ ಮುಂದುವರೆಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(2) ರ ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯಲ್ಲಿ, ಯಶಸ್ವಿನಿ ಯೋಜನೆಯನ್ನು ಪ್ರಾರಂಭಿಸಿದಾಗ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದ ಚಿಕಿತ್ಸೆಗಳನ್ನು ಮತ್ತು ದರಗಳನ್ನೇ ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿರುತ್ತದೆ. (ಮೂಲ 1650 ಚಿಕಿತ್ಸೆಗಳು ಮತ್ತು ತದನಂತರ 478 ICU ಮತ್ತು HDU ಚಿಕಿತ್ಸೆಗಳು ಸೇರಿ ಒಟ್ಟು 2128 ಚಿಕಿತ್ಸೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಯೋಜನೆಯು ಪ್ರಾರಂಭವಾದ ದಿನಗಳಲ್ಲಿ ರಾಜ್ಯದ ಕೆಲವು ಆಸ್ಪತ್ರೆಗಳು ಯಶಸ್ವಿನಿ ಯೋಜನೆಯ ಚಿಕಿತ್ಸೆಗೆ ನಿಗದಿ ಪಡಿಸಿರುವ ದರಗಳು ಕಡಿಮೆ ಇದೆ ಎಂಬ ಕಾರಣ ನೀಡಿ ಯಶಸ್ವಿನಿ ಯೋಜನೆಯಡಿ ನೋಂದಾಯಿಸಿಕೊಳ್ಳಲು ಮುಂದೆ ಬಂದಿರುವುದಿಲ್ಲ.

ಆಸ್ಪತ್ರೆಗಳ ಮೇಲಿನ ಆಕ್ಷೇಪಣೆಗಳನ್ನು ಸರ್ಕಾರವು ಪರಿಗಣಿಸಿ, ಹಿಂದಿನ ಯಶಸ್ವಿನಿ ಯೋಜನೆಯಲ್ಲಿ ಇದ್ದ ಚಿಕಿತ್ಸೆ ದರಗಳು ಅಥವಾ ಪ್ರಸ್ತುತ ಯಶಸ್ವಿನಿ ಯೋಜನೆ ಚಿಕಿತ್ಸೆಗಳ ದರಗಳು ಅಂದರೆ ಎರಡು ಚಿಕಿತ್ಸಾ ದರಗಳಲ್ಲಿ ಯಾವ ದರ ಹೆಚ್ಚಿರುತ್ತದೆಯೋ ಆ ದರವನ್ನು ಪರಿಗಣಿಸಲು ತಿಳಿಸಿ ಸರ್ಕಾರದ ಆದೇಶ ಸಂಖ್ಯೆ : ಸಿಒ 02 ಸಿಎಲ್‌ಎಸ್ 2023, ದಿನಾಂಕ:24-01-2023 ರಂದು ಆದೇಶ ಹೊರಡಿಸಿರುತ್ತದೆ. ಅದರಂತೆ, ಈ ಹಿಂದಿನ ಯಶಸ್ವಿನಿ ಯೋಜನೆಯಲ್ಲಿದ್ದ ಚಿಕಿತ್ಸೆಗಳ ಪೈಕಿ 206 ಚಿಕಿತ್ಸೆಗಳ/ಶಸ್ತ್ರಚಿಕಿತ್ಸೆ ದರಗಳು ಹೆಚ್ಚಾಗಿದ್ದ ಕಾರಣ ಆ ದರಗಳನ್ನು ಅಳವಡಿಸಿಕೊಂಡಿದ್ದು, ಪರಿಷ್ಕೃತ ದರಗಳನ್ನು ದಿನಾಂಕ:25-01-2023 ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಆದಾಗ್ಯೂ ಜನರ ಬೇಡಿಕೆ ಇರುವ ಕೆಲವು ಪ್ರತಿಷ್ಠಿತ/ಪ್ರಮುಖ ಆಸ್ಪತ್ರೆಗಳು ಈಗಿರುವ ದರಗಳು 2018ನೇ ಸಾಲಿಗಿಂತ ಹಿಂದಿನ ದರಗಳಾಗಿದ್ದು, ಪ್ರಸ್ತುತ ಚಿಕಿತ್ಸೆಗಳ ದರಗಳಿಗೆ ಹೋಲಿಸಿದಲ್ಲಿ ಕಡಿಮೆ ಇರುವುದಾಗಿ ತಿಳಿಸಿ ನೋಂದಣಿ ಮಾಡಿಕೊಳ್ಳಲು ಮುಂದೆ ಬರುತ್ತಿಲ್ಲ / ಚಿಕಿತ್ಸೆ ನೀಡಲು ನಿರಾಕರಿಸಿರುತ್ತಾರೆ. ಇದರಿಂದಾಗಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಅದರಲ್ಲೂ ಕರಾವಳಿ ಕರ್ನಾಟಕ ಭಾಗದಲ್ಲಿ ಸದಸ್ಯತ್ವ ನೋಂದಣಿ ಈ ವರ್ಷ ಕಡಿಮೆ ಆಗಿರುತ್ತದೆ. ಯಶಸ್ವಿನಿ ದರ ಕಡಿಮೆ ಇರುವ ಬಗ್ಗೆ ದಿನ ಪತ್ರಿಕೆಗಳಲ್ಲೂ ವರದಿಯಾಗಿರುತ್ತದೆ. ಈ ವಿಷಯವು ವಿಧಾನ ಮಂಡಲದ ಕಲಾಪಗಳಲ್ಲಿ ಪ್ರಸ್ತಾಪವಾಗಿದ್ದು, ಯಶಸ್ವಿನಿ ಯೋಜನೆಯಡಿ ಚಿಕಿತ್ಸೆ ದರಗಳನ್ನು ಪರಿಷ್ಕರಿಸುವ ಬಗ್ಗೆ ಕ್ರಮ ವಹಿಸಲು ಮಾನ್ಯ ಸಹಕಾರ ಸಚಿವರು ಸೂಚಿಸಿರುತ್ತಾರೆಂದು ನಿಬಂಧಕರು ತಿಳಿಸಿರುತ್ತಾರೆ.



Scanned by CamScanner

ಈ ವಿಷಯವು ಆರೋಗ್ಯಕ್ಕೆ ಸಂಬಂಧಿಸಿದ ಯೋಜನೆಯಾಗಿದ್ದು, ಇಲಾಖಾಧಿಕಾರಿಗಳು ವೈದ್ಯಕೀಯ ವಿಷಯದಲ್ಲಿ ಪರಿಣಿತಿಯನ್ನು ಹೊಂದದೇ ಇರುವುದರಿಂದ, ನುರಿತ ವೈದ್ಯಕೀಯ ವೈದ್ಯರನ್ನೊಳಗೊಂಡ ಒಂದು ತಜ್ಞ ಸಮಿತಿಯನ್ನು ರಚಿಸುವುದು ಸೂಕ್ತವಾಗಿರುವುದರಿಂದ ಯಶಸ್ವಿನಿ ಯೋಜನೆಯಡಿ ದರ ಪರಿಷ್ಕರಿಸಲು ನುರಿತ ವೈದ್ಯರು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳನ್ನೊಳಗೊಂಡ ಒಂದು ತಜ್ಞ ಸಮಿತಿಯನ್ನು ರಚಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಯಶಸ್ವಿನಿ ಟ್ರಸ್ಟನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಕೋರಿರುವುದಾಗಿ ನಿಬಂಧಕರು ತಿಳಿಸಿರುತ್ತಾರೆ. ಆದುದರಿಂದ ಯಶಸ್ವಿನಿ ಯೋಜನೆಯಡಿ ಚಿಕಿತ್ಸೆ ದರಗಳನ್ನು ಪರಿಷ್ಕರಿಸುವ ಬಗ್ಗೆ ಕ್ರಮವಹಿಸುವ ಕುರಿತು, ನುರಿತ ವೈದ್ಯರು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳನ್ನೊಳಗೊಂಡ ಒಂದು ತಜ್ಞ ಸಮಿತಿಯನ್ನು ರಚಿಸಲು ಸರ್ಕಾರದ ಹಂತದಲ್ಲಿ ಸೂಕ್ತ ಕ್ರಮಕೈಗೊಳ್ಳಲು ಶಿಫಾರಸ್ಸು ಮಾಡಿ ಮುಂದಿನ ಕ್ರಮಕ್ಕಾಗಿ ನಿಬಂಧಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 142 ಸಿಎಲ್ಎಸ್ 2024, ದಿನಾಂಕ: 26-08-2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಗಳ ದರ ಪರಿಷ್ಕರಣೆಗೆ ಈ ಕೆಳಕಂಡ ತಜ್ಞರನ್ನೊಳಗೊಂಡ ಸಮಿತಿ ರಚಿಸಿ ಆದೇಶಿಸಿದೆ.

**ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಚಿಕಿತ್ಸೆ/ಶಸ್ತ್ರ ಚಿಕಿತ್ಸೆ ದರಗಳ ದರ ಪರಿಶೀಲನಾ ಸಮಿತಿ**

| Sl.No | Name | Designation |
|---|---|---|
| 1 | **Dr. SRINIVAS N.T**<br>Chairman & Opthalmologist,<br>Director Akshara Eye Foundation, Tumkur & MLA, Kudligi Assembly Constituency<br>Ph:9448604663 | President |
| 2 | **Dr. KRISHNA PRASAD**<br>Opthalmologist,<br>Director Prasad Netralaya, Udupi.<br>Ph:9845102334 | Member |
| 3 | **Dr.JAGADISH**<br>Cardiologist,<br>PMSSY-SSH, Victoria Hospital Campus, Bengaluru Medical College & Research Institute, Bengaluru.<br>Ph:9008498880 | Member |



Scanned by CamScanner

| | | |
|---|---|---|
| 4 | **Dr.MANOHAR**<br>Urologist,<br>Institute of Nephro-Uro, Victoria Hospital Campus, Bengaluru.<br>Ph:9845302016 | Member |
| 5 | **Dr.SRINIVAS**<br>Interventional radiologist,<br>Bengaluru Medical College and Research Institute, Bengaluru.<br>Ph:9844962444 | Member |
| 6 | **Dr.PANDU RANGAPPA**<br>Surgical oncologist,<br>Kempegowda Institute of Medical Science Bengaluru.<br>Ph:9242084511 | Member |
| 7 | **Dr. NITHIN KUMAR**<br>Paediatric Surgeon,<br>PMSSY-SSH, Bengaluru Medical College and Research Institute, Bengaluru.<br>Ph:9986069806 | Member |
| 8 | **Dr.DAYANAND MANJUNATH**<br>Orthopaedics, Bengaluru Medical College and Research Institute, Bengaluru.<br>Ph:9902876934 | Member |
| 9 | **Sri.B.R.LINGARAJU**<br>Addl., Register Co.Op.Societies, Addl. Register of Co-operative Societies.<br>Ph:9886802524 | Member |
| 10 | **Sri. M.VENKATASWAMY**<br>CEO, Yeshasvini Trust, Basavangudi, Bengaluru.<br>Ph:9480038548 | Convenor |

ಸಮಿತಿಯು ಈ ಕೆಳಕಂಡ ವಿಷಯದ ಬಗ್ಗೆ ಪರಾಮರ್ಶಿಸಿ 90 ದಿನಗಳೊಳಗೆ ವರದಿಯನ್ನು ಸಲ್ಲಿಸುವುದು.

1. ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಚಿಕಿತ್ಸಾ ದರಗಳನ್ನು ಪರಿಷ್ಕರಿಸುವುದು.
2. ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಲ್ಲಿ ಸೇರಿಸಬಹುದಾದ ಚಿಕಿತ್ಸೆಗಳು, ಶಸ್ತ್ರ ಚಿಕಿತ್ಸೆಗಳನ್ನು ಪರಿಶೀಲಿಸುವುದು.



Scanned by CamScanner

3. ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಗ್ರಾಮೀಣ ಭಾಗದ ರೈತ ಸದಸ್ಯರಿಗೆ ಅನುಕೂಲವಾಗುವಂತೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಲಹೆ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

26/8/2024

**(ರಂಗನಾಥ.ಜಿ)**
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

26-08-2024

**ಇವರಿಗೆ:**

1. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.
2. ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಹೈನುಗಾರಿಕೆ), ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.
3. ಮುಖ್ಯಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್, ನಂ.70, 2ನೇ ಮಹಡಿ, ವೈದ್ಯಕೀಯ ಭವನ, ಕೆ.ಆರ್.ರಸ್ತೆ, ಬಸವನಗುಡಿ, ಬೆಂಗಳೂರು-04 **(ಆದೇಶದ ಪ್ರತಿಯನ್ನು ಸಮಿತಿ ಅಧ್ಯಕ್ಷರು/ಸದಸ್ಯರಿಗೆ ತಲುಪಿಸತಕ್ಕದ್ದು, ಹಾಗೂ ಸಭಾ ಭತ್ಯೆಯನ್ನು ಯಶಸ್ವಿನಿ ಟ್ರಸ್ಟ್ ನಿಯಮಾವಳಿಯಂತೆ ಟ್ರಸ್ಟ್ ಭರಿಸುವುದು.)**
4. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ
2. ವಿಶೇಷ ಕರ್ತವ್ಯಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.
3. ಶಾಖಾ ರಕ್ಷಾ ಕಡತ

*****



Scanned by CamScanner

ಅನುಬಂಧ - 2

59

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಯಶಸ್ವಿನಿ ಯೋಜನೆಯ ಕೆಲವು ಚಿಕಿತ್ಸಾ ದರಗಳ ಪರಿಷ್ಕರಣೆ ಬಗ್ಗೆ.

**ಉಲ್ಲೇಖ:** 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 67ರಲ್ಲಿನ ಘೋಷಣೆ.

***

**ಪ್ರಸ್ತಾವನೆ :**

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಘೋಷಿಸಿದಂತೆ ಯಶಸ್ವಿನಿ ಯೋಜನೆಯನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.

ಈ ಹಿಂದೆ ಸಹಕಾರ ಇಲಾಖೆಯಲ್ಲಿ ಯಶಸ್ವಿನಿ ಯೋಜನೆಯನ್ನು 2003 ರಲ್ಲಿ ಪ್ರಾರಂಭಿಸಿದ್ದು, 2003-04 ರಿಂದ 2017-18 ರವರೆಗೆ ಜಾರಿಯಲ್ಲಿದ್ದು ನಂತರ ದಿನಾಂಕ: 31-05-2018 ರಿಂದ ಈ ಯೋಜನೆಯು ಸ್ಥಗಿತಗೊಂಡಿರುತ್ತದೆ.

ಈ ಹಿಂದಿನ ಯಶಸ್ವಿನಿ ಯೋಜನೆಯು 823 ಶಸ್ತ್ರ ಚಿಕಿತ್ಸೆಗಳನ್ನು ಒಳಗೊಂಡಿತ್ತು. ಪ್ರಸ್ತುತ ಪರಿಷ್ಕೃತ ಯಶಸ್ವಿನಿ ಯೋಜನೆಯಡಿ ಆಯುಷ್ಮಾನ್ ಭಾರತ್ ಯೋಜನೆಯಡಿ ನಿಗದಿಪಡಿಸಿರುವ 1650 ಚಿಕಿತ್ಸೆಗಳನ್ನು ಅದೇ ದರಗಳೊಂದಿಗೆ ಅಳವಡಿಸಿಕೊಳ್ಳಲಾಗಿರುತ್ತದೆ.

ಭಾರತೀಯ ವೈದ್ಯಕೀಯ ಮಂಡಳಿ IMA,, ಕರ್ನಾಟಕ ಮೆಡಿಕಲ್ ಕೌನ್ಸಿಲ್ ಹಾಗೂ ಖಾಸಗಿ ಆಸ್ಪತ್ರೆಗಳ ಒಕ್ಕೂಟಗಳು ಈ ಹಿಂದೆ ಇದ್ದ ಯಶಸ್ವಿನಿ ಚಿಕಿತ್ಸಾ ದರಗಳಿಗಿಂತ ಈಗಿನ ದರಗಳು ಕಡಿಮೆ ಇರುವುದಾಗಿಯೂ, ರಾಷ್ಟ್ರಮಟ್ಟದಲ್ಲಿ ಆಯುಷ್ಮಾನ್ ಭಾರತ್ ದರಗಳು ಹೆಚ್ಚಿದ್ದರೂ, ರಾಜ್ಯದಲ್ಲಿ ಕಡಿಮೆ ದರಗಳನ್ನು ನಿಗದಿಪಡಿಸಿರುವುದಾಗಿ ಆಕ್ಷೇಪಿಸಿ ಯಶಸ್ವಿನಿ ಯೋಜನೆಯಲ್ಲಿ ನೋಂದಣಿಯಾಗಿರುವುದಿಲ್ಲ. ಇದರಿಂದಾಗಿ ಅನೇಕ ಜಿಲ್ಲೆಗಳಲ್ಲಿ ಯೋಜನೆಯ ಫಲಾನುಭವಿಗಳಿಗೆ ಚಿಕಿತ್ಸೆ ಪಡೆಯಲು ಕಷ್ಟಸಾಧ್ಯವಾಗಿರುತ್ತದೆ.

ಅಲ್ಲದೆ ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ರೆಫರಲ್ ವ್ಯವಸ್ಥೆ ಇರುವುದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಅಥವಾ ಕಡಿಮೆ ದರದಲ್ಲಿ ಚಿಕಿತ್ಸೆಗೆ ಅವಕಾಶವಿರುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿ ಆಸ್ಪತ್ರೆಗಳ ನಿರ್ವಹಣೆ, ಮೂಲ ಸೌಕರ್ಯಗಳು, ತಜ್ಞ ವೈದ್ಯರಿಗೆ ಹೆಚ್ಚಿನ ವೇತನ ನೀಡಬೇಕಾಗಿರುವುದರಿಂದ ನಿಗದಿಪಡಿಸಿರುವ ದರಗಳಲ್ಲಿ ಚಿಕಿತ್ಸೆ ನೀಡಲು ಸಾಧ್ಯವಾಗುವುದಿಲ್ಲ. ನಿಗದಿಪಡಿಸಿರುವ ದರಗಳು Consumables ಗೆ ಸಾಕಾಗುವುದಿಲ್ಲವೆಂದು ಆಸ್ಪತ್ರೆಗಳ ಪರವಾಗಿ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಸರ್ಕಾರಕ್ಕೆ ಮತ್ತು ಯಶಸ್ವಿನಿ ಟ್ರಸ್ಟ್‌ಗೆ ಮನವಿಗಳನ್ನು ನೀಡಿ ಹೆಚ್ಚಿನ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಲ್ಲಿ ಪಾಲ್ಗೊಳ್ಳದಂತೆ ತಡೆಹಿಡಿದಿರುತ್ತಾರೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಯಶಸ್ವಿನಿ ಯೋಜನೆಯ ಕೆಲವಾರು ಚಿಕಿತ್ಸೆ ದರಗಳು ಹಿಂದಿನ ಯಶಸ್ವಿನಿ ಯೋಜನೆಯ ದರಗಳಿಗಿಂತ ಕಡಿಮೆಯಿರುವುದನ್ನು ಸರ್ಕಾರವು ಪರಿಶೀಲಿಸಿ, ಎಲ್ಲೆಲ್ಲಿ ಪರಿಷ್ಕೃತ ಯಶಸ್ವಿನಿ ಯೋಜನೆಯ ದರಗಳು ಹಿಂದಿನ (ಅಂದರೆ 2018ರಲ್ಲಿ ಜಾರಿಯಲ್ಲಿದ್ದಂತೆ) ಯಶಸ್ವಿನಿ ಯೋಜನೆಯ ದರಗಳಿಗಿಂತ ಕಡಿಮೆಯಿರುತ್ತದೆಯೋ ಅಂತಹ ಚಿಕಿತ್ಸೆಗಳಿಗೆ ಮಾತ್ರ ಹಿಂದಿನ ಯಶಸ್ವಿನಿ ಯೋಜನೆಯ ದರಗಳನ್ನೇ ಅಳವಡಿಸಿಕೊಳ್ಳುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 02 ಸಿಎಲ್‌ಎಸ್ 2023, ಬೆಂಗಳೂರು, ದಿನಾಂಕ: 24-01-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನಿಂದ ಪ್ರಾರಂಭವಾಗಿರುವ ಯಶಸ್ವಿನಿ ಯೋಜನೆಗೆ ***ಪ್ರಸ್ತುತ ಅಳವಡಿಸಿಕೊಂಡಿರುವ ಆಯುಷ್ಮಾನ್ ಭಾರತ್ ಯೋಜನೆಯ ದರಗಳು, ಕೆಲವು ಚಿಕಿತ್ಸೆಗಳಿಗೆ ಹಿಂದಿನ (ಅಂದರೆ 2018ರಲ್ಲಿ ಜಾರಿಯಲ್ಲಿದ್ದಂತೆ) ಯಶಸ್ವಿನಿ ಯೋಜನೆಯ ದರಗಳಿಗಿಂತ ಎಲ್ಲೆಲ್ಲಿ ಕಡಿಮೆಯಿರುತ್ತದೆಯೋ ಅಂತಹ ಚಿಕಿತ್ಸೆಗಳಿಗೆ ಮಾತ್ರ ಹಿಂದಿನ ಯಶಸ್ವಿನಿ ಯೋಜನೆಯ ದರಗಳನ್ನೇ ಅಳವಡಿಸಿಕೊಳ್ಳಲು*** ಅನುಮತಿ ನೀಡಿ ಆದೇಶಿಸಿದೆ.

...2

Scanned with OKEN Scanner

ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 21-01-2023 ರಂದು ನೀಡಿರುವ ಅನುಮೋದನೆಯಂತೆ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Radha H.C 24/1/23
(ರಾಧ ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ-3(ಪ್ರ),
ಸಹಕಾರ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಸರ್ಕಾರದ ಮುಖ್ಯಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ.
8. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು.
12. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ ವ್ಯವಸ್ಥಾಪಕ ನಿರ್ದೇಶಕರುಗಳು.
13. ರಾಜ್ಯದ ಸಹಕಾರ ಸಂಘಗಳ ಪ್ರಾಂತೀಯ ಜಂಟಿ ನಿಬಂಧಕರುಗಳು ಬೆಂಗಳೂರು/ ಮೈಸೂರು/ ಬೆಳಗಾವಿ/ ರಾಯಚೂರು.
14. ರಾಜ್ಯದ ಎಲ್ಲಾ ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕರುಗಳು.
15. ರಾಜ್ಯದ ಎಲ್ಲಾ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು.
16. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
17. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಣಾದಿಕಾರಿಗಳು.
18. ವಿಶೇಷ ಕರ್ತವ್ಯಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಸಹಕಾರ ಇಲಾಖೆ.
19. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್.

Scanned with OKEN Scanner